ದಿನಾಂಕಃ **12.12.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ. ಎಂ.ಎಸ್.ಎನ್. ವಕೀಲರಿಂದ :**

ದಿನಾಂಕಃ 06.02.2021 ರ ನೋಂದಾಯಿತ ವಿಲ್ ಅನ್ನು **ನಿಡಿ-1** ಎಂದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ-1(ಎ)** ಎಂದು ಗುರುತಿಸಲಾಯಿತು. ನನ್ನ ಜೊತೆ ನಿಡಿ-1 ಕ್ಕೆ ನವೀನ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ. ನಿಡಿ-1 ನ್ನು ವಿಷ್ಣುಮೂರ್ತಿ ಎನ್ನುವ ಪತ್ರ ಬರಹಗಾರರು ಬರೆದಿರುತ್ತಾರೆ. ನನ್ನ ತಾತ ಬೋರಯ್ಯರವರು ಮಕ್ಕಳಾದ ಮಂಜುನಾಥ್, ಮೈನಾವತಿ, ಹೇಮಲತಾ, ಲೇಖನ್ ಮತ್ತು ವಿಜಯಾರವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ನಿಡಿ-1 ರಲ್ಲಿರುವ ತಾತನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ-1(ಬಿ)** ಎಂದು ಗುರುತಿಸಲಾಯಿತು. ತನ್ನ ತಾತನ ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು **ನಿಡಿ-2** ಎಂದು, OS No.254/2021 ರ ವಾದಪತ್ರದ ದೃಢೀಕೃತ ನಕಲನ್ನು **ನಿಡಿ-3** ಎಂದು, ಸದರಿ ದಾವೆಯಲ್ಲಿ ಪ್ರತಿವಾದಿಯು ಸಲ್ಲಿಸಿರುವ ಲಿಖಿತ ತಕರಾರಿನ ದೃಢೀಕೃತ ನಕಲನ್ನು **ನಿಡಿ-4** ಎಂದು, ದಿನಾಂಕಃ 07.01.2021 ರ ದಾನಪತ್ರದ ದೃಢೀಕೃತ ನಕಲನ್ನು **ನಿಡಿ-5** ಎಂದು, ನಮೂನೆ-9 ಮತ್ತು 11 ರ ಇ-ಸ್ವತ್ತಿನ ದಾಖಲೆಗಳನ್ನು **ನಿಡಿ-6 ಮತ್ತು 7** ಎಂದು, ಕಂದಾಯ ರಶೀದಿಗಳ 2 ದೃಢೀಕೃತ ನಕಲುಗಳನ್ನು **ನಿಡಿ-8 ಮತ್ತು 9** ಎಂದು, ನಮೂನೆ-9 ಮತ್ತು 11 ರ ಇ-ಸ್ವತ್ತಿನ ದೃಢೀಕೃತ ದಾಖಲೆಗಳನ್ನು **ನಿಡಿ-10 ಮತ್ತು 11** ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಾಕಾಶ ಕೋರಿದ್ದು, ಸಮಯಾವಾಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**